# ದೇವರ ಅಳಲು

■ ವೆಂಕಟೇಶ ಚಾಗಿ

ಅಂಬಾಪುರ ಎಂಬ ಊರಿನ ಶಾಲೆಯ ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ಹೋಗಬೇಕೆಂದು ನಿರ್ಧಾರ ಕೈಗೊಂಡರು. ಅದರಂತೆ ಶಾಲೆಯ ಶಿಕ್ಷಕರು ಎಲ್ಲ ಮಕ್ಕಳಿಗೂ ಪ್ರವಾಸದ ಅವಧಿಯಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಿದರು. ಶಿಸ್ತನ್ನು ಪಾಲಿಸುವುದು ಹಾಗೂ ಪ್ರವಾಸದ ಸ್ಥಳಗಳಲ್ಲಿ ಸಭ್ಯತೆ ಮತ್ತು ಶಾಂತಿಯಿಂದ ವರ್ತಿಸುವುದು, ಪ್ರವಾಸದ ಸಂದರ್ಭಗಳಲ್ಲಿ ಆಗುವ ಅನುಭವಗಳನ್ನು ಬರೆದಿಟ್ಟುಕೊಳ್ಳುವುದು, ಅನವಶ್ಯಕ ತಿಂಡಿತಿನಿಸುಗಳನ್ನು ತಿನ್ನದೇ ಇರುವುದು, ಕಾಲಹರಣ ಮಾಡದೇ ಸಮಯವನ್ನು ಸದುಪಯೋಗ ಮಾಡಿಕೊಳ್ಳುವುದು... ಹೀಗೆ ಹಲವಾರು ವಿಷಯಗಳ ಬಗ್ಗೆ ಮಕ್ಕಳು ಜಾಗೃತ ವಹಿಸಿ ಪ್ರವಾಸವನ್ನು ಉಪಯುಕ್ತಗೊಳಿಸಲು ತಿಳಿಸಿದರು.

ಮಕ್ಕಳು ಹಾಗೂ ಶಿಕ್ಷಕರು ಎಲ್ಲಾ ಸಿದ್ದತೆಗಳೊಂದಿಗೆ ಅಂದು ಬೆಳಗ್ಗೆ ಒಂದು ಐತಿಹಾಸಿಕ ಸ್ಥಳಕ್ಕೆ ಪ್ರವಾಸ ಹೊರಟರು. ಸುಮಾರು ಎರಡು ಮೂರು ಗಂಟೆಗಳ ಪ್ರಯಾಣದ ನಂತರ ಐತಿಹಾಸಿಕ ಸ್ಥಳವನ್ನು ತಲುಪಿದರು. ಮಕ್ಕಳು ಹಾಗೂ ಶಿಕ್ಷಕರು ಅಲ್ಲಿನ ದೇವಾಲಯಗಳನ್ನು ಐತಿಹಾಸಿಕ ಕಟ್ಟಡಗಳನ್ನು ವೀಕ್ಷಿಸಿದರು. ಕಟ್ಟಡಗಳ ರಚನೆಯನ್ನು ಕಂಡು ಮೂಕವಿಸ್ಮಿತರಾದರು. ಮಧ್ಯಾಹ್ನದ ಸಮಯವಾದ್ದರಿಂದ ಪಕ್ಕದಲ್ಲಿಯೇ ಹರಿಯುತ್ತಿದ್ದ ನದಿಯ ದಂಡೆಯ ಮೇಲೆ ಊಟವನ್ನು ಮಾಡಲು ನಿರ್ಧರಿಸಿ ತಾವು ತಂದಿದ್ದ ಆಹಾರ ಪದಾರ್ಥಗಳೊಂದಿಗೆ ಒಟ್ಟಾಗಿ ಕುಳಿತು ಊಟ ಮಾಡತೊಡಗಿದರು.

ಶಿಕ್ಷಕರು ಮಕ್ಕಳ ಅನುಭವಗಳನ್ನು ಕೇಳುತ್ತಾ ಐತಿಹಾಸಿಕ ಸ್ಥಳದ ಮಹತ್ವವನ್ನು ತಿಳಿಸತೊಡಗಿದರು. ಮಕ್ಕಳು ಊಟವಾದ ನಂತರ ತಾವು ತಂದಿದ್ದ ಆಹಾರ ಪದಾರ್ಥಗಳ ಪ್ಲಾಸ್ಟಿಕ್ ಹಾಳೆಗಳನ್ನು ನದಿಯ ದಂಡೆಯ ಮೇಲೆ ಎಸೆದರು. ನಂತರ ತಮ್ಮ ಪ್ರವಾಸವನ್ನು ಮುಂದುವರೆಸಲು ಸಿದ್ಧರಾದರು. ಅದೇ ಐತಿಹಾಸಿಕ ಸ್ಥಳದಲ್ಲಿ ಇನ್ನುಳಿದ ಕಟ್ಟಡಗಳನ್ನು ನೋಡಲು ಮುನ್ನಡೆದರು. ದಾರಿಯಲ್ಲಿ ಹೊರಡುವಾಗ ಹತ್ತಿರದಲ್ಲಿ ಯಾರೋ ಅಳುತ್ತಾ ಕುಳಿತಿರುವುದು ಕಂಡುಬಂದಿತು. ಅಳುತ್ತಿರುವುದು ಯಾರೆಂದು ಮಕ್ಕಳು ನೋಡಿದಾಗ ಅಲ್ಲಿ ದೇವರು ಅಳುತ್ತಿರುವುದನ್ನು ಕಂಡರು. ಎಲ್ಲಾ ಮಕ್ಕಳು ದೇವರ ಬಳಿ ಹೋಗಿ ಅಳುವ ಕಾರಣವನ್ನು ಕೇಳಿದರು. ಆಗ ದೇವರು, 'ಮಕ್ಕಳೇ , ನಾನು ಈ ಲೋಕವನ್ನು ಸೃಷ್ಟಿಸಿದೆ. ಪ್ರಾಣಿ ಪಕ್ಷಿಗಳು ಗಿಡಮರಗಳನ್ನು ಸೃಷ್ಟಿಸಿದೆ. ಎಲ್ಲರಂತೆ ಮಾನವನನ್ನು ಸೃಷ್ಟಿಸಿದೆ. ಆದರೆ ನೋಡಿ ಈ ಮಾನವನು ನನ್ನ ಸೃಷ್ಟಿಯನ್ನು ಎಷ್ಟೋಂದು ಕಲುಷಿತಗೊಳಿಸಿದ್ದಾನೆ. ಪ್ಲಾಸ್ಟಿಕ್ ಹಾಳೆಗಳನ್ನು ಎಲ್ಲೆಂದರಲ್ಲಿ ಬೀಸಾಕಿದ್ದಾನೆ. ಅಳಿದುಳಿದ ಪದಾರ್ಥವನ್ನು, ಹರಿದ ಬಟ್ಟೆಗಳನ್ನು, ತ್ಯಾಜ್ಯ ವಸ್ತುಗಳನ್ನು, ಒಂದೆ ಎರಡೇ ಎಷ್ಟೊಂದು ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡದೇ ಬಿಸಾಕಿದ್ದಾನೆ. ಈ ಐತಿಹಾಸಿಕ ಸ್ಥಳವನ್ನೆಲ್ಲಾ ಸುತ್ತಿ ಬನ್ನಿ ಆ ನಿಮಗೇ ತಿಳಿಯುತ್ತದೆ ಈ ಪ್ರದೇಶ ಎಷ್ಟೊಂದು ಕಲ್ಮಶವಾಗಿದೆಯೆಂದು. ಈ ಮಾನವನಿಗೆ ಬುದ್ಧಿವಂತನನ್ನಾಗಿ ಮಾಡಿದರೂ ಯಾವುದೇ ಪ್ರಯೋಜನ ಇಲ್ಲದಂತಾಯಿತು. ಏನು ಮಾಡುವುದು ಎಂಬುದು ತಿಳಿಯುತ್ತಿಲ್ಲ. ನೀವೆ ಒಂದು ಪರಿಹಾರ ಹುಡುಕಿ ಎಂದಾಗ, ಮಕ್ಕಳು, 'ದೇವರೆ, ನಾವು ನಿಮ್ಮ ಮಾತುಗಳಿಂದ ಒಳ್ಳೆಯ ಪಾಠ ಕಲಿತೆವು.ನಾವು ಇನ್ನು ಮುಂದೆ ಸ್ವಚ್ಛತೆಯನ್ನು ಕಾಪಾಡುತ್ತೇವೆ. ಕಸವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುತ್ತೇವೆ. ಹಾಗೂ ಇದರಂತೆ ಭೂಮಿಯ ಮೇಲಿನ ಎಲ್ಲರೂ ಇದೇ ರೀತಿ ಪರಿಸರ ವ್ಯವಸ್ಥೆಯನ್ನು ಕಾಪಾಡಬೇಕೆಂದು ತಿಳಿಸುತ್ತೇವೆ' ಎಂದರು. ದೇವರು ಆಗಲಿ ನಿಮ್ಮ ಮೇಲೆ ನನಗೆ ನಂಬಿಕೆ ಇದೆ ನಾನು ಹೋಗಿ ಬರುತ್ತೇನೆ ಎಂದು ಹೇಳಿ ಮಾಯವಾದನು.

ಮಕ್ಕಳು ತಾವು ಎಲ್ಲೆಂದರಲ್ಲಿ ಬೀಸಾಡಿದ್ದ ಪ್ಲಾಸ್ಟಿಕ್ ಕಸಕಡ್ಡಿಗಳನ್ನು ಒಂದು ಕಸದ ಬುಟ್ಟಿಯಲ್ಲಿ ಹಾಕಿದರು. ಅಲ್ಲಿದ್ದ ಜನರಿಗೆ ಸ್ವಚ್ಛತೆಯ ಅರಿವು ಮೂಡಿಸಿದರು. ಅಲ್ಲಿನ ಆಡಳಿತಾಧಿಕಾರಿಯನ್ನು ಭೇಟಿ ಮಾಡಿ ದೇವರ



ಮಂಜುನಾಥ ಹುಲುಕೊಪ್ಪದ

ಆಶಯವನ್ನು ತಿಳಿಸಿದರು. ಇನ್ನು ಮುಂದೆ ಸ್ವಚ್ಛತೆ ಕಡೆಗೆ ಹೆಚ್ಚು ಗಮನ ಹರಿಸುವುದಾಗಿ ತಿಳಿಸಿದರು. ಮಕ್ಕಳು ಸ್ವತಃ ಆ ಪ್ರದೇಶದ ತುಂಬೆಲ್ಲಾ ಓಡಾಡಿ ಜನರಿಗೆ ಸ್ವಚ್ಚತೆಯ ಅರಿವು ಮೂಡಿಸಿ, ಐತಿಹಾಸಿಕ ಸ್ಥಳದ ಸಂಪೂರ್ಣವಾಗಿ ಸ್ವಚ್ಛತೆಯನ್ನು ಕೈಗೊಂಡರು. ಅಲ್ಲಿನ ಜನರಿಗೆ ಮಕ್ಕಳ ಈ ಕಾರ್ಯವು ತುಂಬಾ ಮೆಚ್ಚುಗೆ ಆಯಿತು. ಜನರಲ್ಲಿಯೂ ಜಾಗೃತಿ ಮೂಡಿತು. ದೇವರು ಮರೆಯಲ್ಲಿ ನಿಂತು ನೋಡಿ ಸಂತುಷ್ಟನಾದ. ಅಲ್ಲಿನ ಆಡಳಿತ ಸಿಬ್ಬಂದಿ ಮಕ್ಕಳನ್ನು ಗೌರವಿಸಿದರು. ಮಕ್ಕಳ ಪ್ರವಾಸವು ಒಂದು ಕೆಲಸದೊಂದಿಗೆ ಪೂರ್ಣ ಗೊಂಡಿತು. ಸಂಜೆಯಾಗುತ್ತಿದ್ದಂತೆಯೇ ಮಕ್ಕಳು ತಮ್ಮ ಊರಿನ ಕಡೆಗೆ ನಡೆದರು. ಮಕ್ಕಳ ಕಾರ್ಯ ದೇವರಿಗೆ ಸಂತೋಷ ತಂದಿತು. ■